# ಒಳ ಮೈ, ಹೊರ ಮೈ ಒಳಹೊರ ಮೈ



**ಅನುಪಮಾ ಪ್ರಸಾದ್**

ಕಲೆ: ಮುರಳೀಧರ ರಾಥೋಡ್

ಲೋಹಿತೇಶ್ವರ ಸಭಾಂಗಣದ ಹೊರಗಿನ ಆವರಣದ ಮೂಲೆಯಲ್ಲಿ ಸಿಗರೇಟ್ ಹಚ್ಚಿ ನಿಂತಿದ್ದ. ನೋಡಿದವರು ಸಿಗರೇಟ್ ಸೇದಲು ನಿಂತಿದ್ದಾನೆ, ಬರುತ್ತಾನೆ ಈಗ ಎಂದು ನಮಸ್ಕಾರ ಕೊಟ್ಟು ಒಳ ನಡೆಯುತ್ತಿದ್ದರು. ಕಾರ್ಯಕ್ರಮ ಈಗ ಶುರುವಾಗುತ್ತದೆ. ರಮಣಿ ಇನ್ನೂ ತಲುಪಿರಲಿಲ್ಲ. ಅವನೊಳಗೆ ತುಸು ಚಡಪಡಿಕೆ ಶುರುವಾಗಿತ್ತು. ಅಷ್ಟರಲ್ಲೇ ಸಭಾಂಗಣದೊಳಗಿಂದ ನಿರೂಪಕನ ಧ್ವನಿ ಕೇಳಲಾರಂಭಿಸಿತು. ಈಗ ಮೊದಲ ಗೋಷ್ಠಿ ಆರಂಭವಾಗುತ್ತಿದೆಯೆಂದು ಅದಕ್ಕೂ ಮೊದಲು ಹೇಳಲೇಬೇಕಾದ ಒಂದು ವಿಚಾರವಿದೆಯೆಂದೂ ಹೇಳುತ್ತಾ, 'ಔಪಚಾರಿಕ ಉದ್ಘಾಟನೆ ಎಂಬ ಚರ್ವಿತಚರ್ವಣ ಇಲ್ಲದೆಯೇ ನೇರವಾಗಿ ಗೋಷ್ಠಿ ಆರಂಭವಾಗುತ್ತಿದೆ. ಅದಕ್ಕೂ ಮೊದಲು ನಮ್ಮ ಸಂಚಾಲಕರು ಈ ಸಂಕಿರಣದ ರೂಪರೇಷೆ ತಯಾರಾದ ಬಗೆಯನ್ನು ನಿಮ್ಮೆಲ್ಲರ ಮುಂದೆ ಹಂಚಿಕೊಳ್ಳಲಿದ್ದಾರೆ. ಈಗ ಮಾತು ಸಂಚಾಲಕರಿಂದ' ಅಂದ. ಇದೇನಿದು...? ಉದ್ಘಾಟನೆಯ ಔಪಚಾರಿಕತೆ ಬಿಡೋಣವೆಂಬ ಸಲಹೆ ಅವನದೇ. ಆದರೆ, ಮಧ್ಯೆ ಈ ಸಂಚಾಲಕರ ಮಾತಿನ ಪ್ರಸ್ತಾಪವಿರಲಿಲ್ಲ. ಈಗ ಏನೋ ಕಿತಾಪತಿ ನಡೆಸಿದ್ದಾರೆ. ಆ ಮನುಷ್ಯನಿಗೆ ಮೈಕಲ್ಲಿ ಮಾತಾಡುವ ಹುಕಿ ಬಂತಾ ಹೇಗೆ ಅಂದುಕೊಂಡ. ಸಂಚಾಲಕನ ಸ್ವರ ಕೇಳಲಾರಂಭಿಸಿತು. 'ಇಂತಹ ಒಂದು ಕಾರ್ಯಕ್ರಮ ಮಾಡಬೇಕೆಂದು ಒಗ್ಗೂಡಿದ ರಾಜ್ಯದ ಪ್ರಮುಖ ಪತ್ರಿಕೆಗಳು ಒಟ್ಟಾಗಿ ಸಮಾಲೋಚನೆ ನಡೆಸಿದಾಗ ಮುಖ್ಯವಾಗಿ 'ಅದಮ್ಯ' ಪತ್ರಿಕೆಯ ಮಾಲಕರು, ಸಂಪಾದಕರೂ ಆಗಿರುವ ಬೆಂಕಿ ಜನಾರ್ದನ ಹಾಗೂ 'ಉಗಮ' ಪತ್ರಿಕೆಯ ಸಂಪಾದಕರೂ ಮಾಲಕರು ಆಗಿರುವ ಸ್ವತಃ ತೀವ್ರ ಸಂವೇದನೆಯ ಬರಹಗಾರರೂ ಆಗಿರುವ ಲೋಹಿತೇಶ್ವರರನ್ನು ಸಂಪರ್ಕಿಸಿದೆವು. ಇಬ್ಬರೂ ಸೈದ್ಧಾಂತಿಕವಾಗಿ ಭಿನ್ನರಾಗಿದ್ದರೂ ನಮ್ಮ ಯೋಜನೆಯನ್ನು ಮೆಚ್ಚಿದರು. ನಮ್ಮ ಜೊತೆ ನಿಂತರು. ಬೆಂಕಿ ಜನಾರ್ದನ ಅವರು ಅತ್ಯಗತ್ಯ ಕೆಲಸದ ಮೇಲೆ ವಿದೇಶಕ್ಕೆ ಹೋಗಿರುವುದರಿಂದ ಅವರು ಸ್ವತಃ ಭಾಗವಹಿಸಲು ಅನನುಕೂಲವಾಗಿದೆ. ಲೋಹಿತೇಶ್ವರರು ಇಡೀ ಸಂಕಿರಣದ ರೂಪರೇಷೆ ಹಾಕಿಕೊಟ್ಟರು. ಇಂದಿನ ಗೋಷ್ಠಿಗಳು ಕುರ್ಚಿ ಇಲ್ಲದವುಗಳು. ಪ್ರತಿ ಗೋಷ್ಠಿಯಲ್ಲೂ ಎಂಟು ಕವಿಗಳ ಕವಿತೆ ಪ್ರಸ್ತುತಿ ಇರುತ್ತದೆ. ಎರಡು ಗೋಷ್ಠಿ ಆದೊಡನೆ ಹತ್ತು ನಿಮಿಷ ಚಹಾ ವಿರಾಮ. ನಂತರ ವಾಚಿಸಿದ ಕವಿತೆಗಳ ಬಗ್ಗೆ ಪ್ರತಿ ಸ್ಪಂದನ. ನಂತರ ಊಟದ ವಿರಾಮ.